ವಾರದ ಪತ್ರ

# ವರ್ಣಭೇದ ಪ್ರಚೋದನೆ

ವಿಶ್ವದೆಲ್ಲೆಡೆ ವರ್ಣಭೇದದ ವಿರುದ್ಧ ಹೋರಾಟ ನಡೆಯುತ್ತಿರುವ ಈ ಕಾಲದಲ್ಲಿ, ಝೀ ಕನ್ನಡದ 'ಸರಿಗಮಪ ಸೀಸನ್ 17'ರಲ್ಲಿ ನಿರೂಪಕಿ ಸ್ಪರ್ಧಿಯೊಬ್ಬರ ಸೌಂದರ್ಯ ವರ್ಣಿಸುವಾಗ 'ಬಿಳಿ ಸುಂದರಿ', 'ಬಿಳಿ ಬೊಂಬೆ' ಎಂದು ಹೊಗಳಿ ಬೆಳ್ಳಗಿರುವವರು ಮಾತ್ರ ಸುಂದರವಾಗಿರಲು ಸಾಧ್ಯ ಎಂಬಂತೆ ಪ್ರತಿಬಿಂಬಿಸುತ್ತಾರೆ. ತೀರ್ಪುಗಾರರು ಅದೇ ರೀತಿ ಕಾಮೆಂಟ್ ಕೊಡುವುದನ್ನು ಕಂಡು ಮನಸ್ಸಿಗೆ ಬೇಸರವೆನಿಸುತ್ತದೆ. ಈ ಮನೋಭಾವ ಸರಿಯಲ್ಲ, ತಿದ್ದಿಕೊಳ್ಳುವುದು ಒಳ್ಳೆಯದು.

—ಮುರಳಿ, ಬೆಂಗಳೂರು

## ಹಾಸ್ಯಕ್ಕೆ ನ್ಯಾಯ

ಟೀವಿ ವಾಹಿನಿಗಳಲ್ಲಿ ಹಾಸ್ಯದ ಹೆಸರಿನಲ್ಲಿ ಪರಿಹಾಸ್ಯವೇ ಜಾಸ್ತಿ. ಒಂದು ವಾಹಿನಿಯವರು ಒಬ್ಬ ನಟಿಗೆ 'ಹಾಸ್ಯನಟಿ' ಬಿರುದು ಕೊಟ್ಟರು. ಆಕೆ ಮಾಡುವುದೆಲ್ಲ ಕುಯುಕ್ತಿ; ಉಂಡ ಮನೆಗೆ ದ್ರೋಹ ಬಗೆಯುವುದು. ಆಕೆಗೆ ಖಳನಾಯಕಿ ಬಿರುದು ಕೊಟ್ಟರೆ ಸರಿಯಾಗುತ್ತಿತ್ತು. ನಿಜವಾದ ಹಾಸ್ಯ ನಟನೆ ಎಂದರೆ ಕಲರ್ಸ್ ಕನ್ನಡದ 'ಗೀತಾ' ಧಾರಾವಾಹಿಯಲ್ಲಿ ಎಂಎಲ್‌ಎ ಭಾವಮೈದುನನ ಪಾತ್ರಧಾರಿ ಮಾಡುವುದು. ಅವರ ಹಾವ–ಭಾವ ಮಾತಿನ ವೈಖರಿ ಪ್ರತಿಯೊಂದು ಚೆನ್ನ. ಧಾರಾವಾಹಿಯಲ್ಲಿ ಕೆಟ್ಟ ಮನುಷ್ಯನಾದರೂ ಅಭಿನಯ ಮಾತ್ರ ಸೂಪರ್. ಆ ನಟ ಆದಷ್ಟು ಬೇಗ ಹಿರಿತೆರೆಯಲ್ಲಿ ಹೆಸರು ಮಾಡುವುದು ಖಂಡಿತ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಚಂದನ ಸುದ್ದಿವಾಚನವೇ ಚೆಂದ!

ಕೊರೊನಾದ ಗದ್ದಲದಲ್ಲಿ ಸೀರಿಯಲ್ ನೋಡುವುದಕ್ಕಿಂತ ವಾರ್ತೆಗಳನ್ನು ನೋಡೋಣ ಎಂದು ಅನಿಸುತ್ತದೆ. ಆದರೆ ಸುದ್ದಿ ಓದುವ ವಾಚಕರ ಧ್ವನಿಯ ಏರಿಳಿತಗಳನ್ನು ಕೇಳಲು ಹಿಂಸೆಯಾಗುತ್ತದೆ. ಉತ್ಪ್ರೇಕ್ಷೆ, ಭಯ ಹುಟ್ಟಿಸುವುದು, ಬ್ರೇಕಿಂಗ್ ಭರಾಟೆ ನೋಡಿ ಸುದ್ದಿ ವಾಹಿನಿಗಳನ್ನು ಏಕೆ ಬ್ಯಾನ್ ಮಾಡಬಾರದು ಅನಿಸುತ್ತಿದೆ. ಇದು ಉತ್ತಮ ಬೆಳವಣಿಗೆಯಲ್ಲ. ನಾವು ಚಿಕ್ಕವರಿದ್ದಾಗ ರೇಡಿಯೊದಲ್ಲಿ ಸುದ್ದಿ ಕೇಳಲು ಖುಷಿಯಾಗುತ್ತಿತ್ತು. ಈಗ ಚಂದನದಲ್ಲಿ ಸುದ್ದಿವಾಚನ ಚೆನ್ನಾಗಿರುತ್ತದೆ.

—ವೆಂಕಟೇಶ್, ದಾವಣಗೆರೆ

## ಸ್ಟಾರ್ ಮಹಾಭಾರತ

ಸ್ಟಾರ್ ಸುವರ್ಣದಲ್ಲಿ 'ಮಹಾಭಾರತ' ಎಲ್ಲ ವಯಸ್ಸಿನವರ ಮನದ ಮಾತಾಗಿದೆ. ಕನ್ನಡದಲ್ಲಿ ಡಬ್ ಆಗಿದ್ದರೂ ಸೈ ಎನಿಸಿಕೊಂಡಿದೆ. ಪಾತ್ರಕ್ಕೆ ಹೊಂದುವಂತಹ ದನಿ ಇಲ್ಲದಿದ್ದರೆ ಯಾವುದೇ ಧಾರಾವಾಹಿ ಅಥವಾ ಸಿನಿಮಾ ಸೋಲುತ್ತದೆ. ಈ ನಿಟ್ಟಿನಲ್ಲಿ ಶಕುನಿ ಮತ್ತು ಕೃಷ್ಣ ಸೇರಿದಂತೆ ಹಲವಾರು ಪಾತ್ರಗಳಿಗೆ ಸೂಕ್ತ ದನಿಯಿಂದ ಧಾರಾವಾಹಿ ಗೆದ್ದಿದೆ. ಬೃಹನ್ನಳೆಗೆ ನೀಡಿದ ದನಿ ಹಾಸ್ಯಾಸ್ಪದವಾಗಿಯೂ ಆ ಪಾತ್ರವನ್ನು ಕೀಟಲೆ ಮಾಡುವಂತೆ ಇತ್ತು. ಡಬ್ಬಿಂಗ್‌ನಲ್ಲಿ ದನಿಯೇ ಹೀರೊ. ನಾವು ಎಳೆಯರಾಗಿದ್ದಾಗ ಬಿ.ಆರ್. ಚೋಪಡ, ರವಿ ಚೋಪಡಾರವರ ಮಹಾಭಾರತ ನಮ್ಮ ಮನದಲ್ಲಿ ಇನ್ನೂ ನಿಂತಿದೆ. ಹಾಗೆ ಈಗಿನ ಎಳೆಯರಿಗೆ ಕೂಡ ಸಿದ್ಧಾರ್ಥಕುಮಾರ್ ತಿವಾರಿಯವರ ಈ ಧಾರಾವಾಹಿ ಮೆಚ್ಚುಗೆಯಾಗಿದೆ. ಯುದ್ಧ ಆರಂಭವಾಗಿ ಇನ್ನೇನು ಮುಗಿಯುವಾಗ ಇದರ ಹಿಂದೆಯೇ ರಾಮಾಯಣ ಪ್ರಸಾರವಾಗುತ್ತಿದ್ದು ಮಕ್ಕಳಿಗೆ ಮತ್ತು ರಾಮಾಯಣ ಮಹಾಭಾರತವನ್ನು ತಿಳಿಯದಿದ್ದವರಿಗೆ ಉತ್ತಮ ಮನರಂಜನೆಯನ್ನೂ ತಿಳಿವಳಿಕೆಯನ್ನೂ ನೀಡುತ್ತದೆ.

—ಪ್ರದೀಪ್ ಎನ್. ಚೆಲುವರಸನಕೊಪ್ಪಲು

## ಎಳೆದಿದ್ದು ಸಾಕು, ಮುಗಿಸಬೇಕು

ಕಲರ್ಸ್ ಕನ್ನಡದ 'ಪುಟ್ಟಗೌರಿ ಮದುವೆ' ಒಂದು ಹಂತಕ್ಕೆ ಬಂದಿತ್ತು. ಅಷ್ಟಕ್ಕೇ ಆ ಅಪ್ರಬುದ್ಧ ಧಾರಾವಾಹಿಯನ್ನು ನಿಲ್ಲಿಸಿದ್ದರೆ, ಒಂದು ಘನತೆ ಇರುತ್ತಿತ್ತು! ಅದನ್ನು (ಅ)ಮಂಗಳಗೌರಿ ಎಂದು ಹೆಸರು ಬದಲಾಯಿಸಿದರು. ಅಂಗನವಾಡಿ ಮಗುವಿನ ತೊದಲು ನುಡಿಯಿಂದ ಒತ್ತಿ ಪಡೆಯದಂತೆ ಸಂಭಾಷಣೆ ಹೇಳುವ ನಾಯಕಿಯನ್ನು ಇಟ್ಟುಕೊಂಡು, ಅಸಂಬದ್ಧ ನಿರ್ವಹಣೆ, ನೋಡಿದರೆ ವಾಂತಿ ಬರುತ್ತದೆ. ಇನ್ನೂ ಕನಿಷ್ಠ ಐವತ್ತು ವರ್ಷಕ್ಕೆ ಈ ಧಾರಾವಾಹಿನಿಯನ್ನು ಎಳೆದುಕೊಂಡು ಹೋಗಿ, ಜಾಗತಿಕ ರೆಕಾರ್ಡ್ ಮಾಡುವರೆಂದು ಅನ್ನಿಸುತ್ತಿದೆ. ವೀಕ್ಷಕರ ಬೇಕು–ಬೇಡ ನೋಡದ ಅವರ ಪ್ರಯತ್ನವನ್ನು ಆ ದೇವರು ಪೂರ್ತಿಗೊಳಿಸುವಷ್ಟು ಆಯುಷ್ಯ ಕೊಟ್ಟರೆ ಒಳ್ಳೆಯದು.

—ರಮಾಮಣಿ ಎಂ.ಆರ್., ಚಿತ್ರದುರ್ಗ

## ಸಾಮಾನ್ಯ ಜ್ಞಾನದ ಕೊರತೆ

ಕೊಡಗಿನ ಬ್ರಹ್ಮಗಿರಿ ಬೆಟ್ಟದಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕುಸಿತದಲ್ಲಿ ಕಣ್ಮರೆಯಾದ ಅರ್ಚಕರ ಶೋಧಕಾರ್ಯ ನಡೆದಿತ್ತು. ಅದನ್ನು ವರದಿ ಮಾಡುವ ಕೆಲವು ಸುದ್ದಿವಾಹಿನಿಗಳ ವೈಖರಿ ಅಸಹ್ಯಕರವಾಗಿತ್ತು. ಹುಡುಕಾಟದ ಸಮಯದಲ್ಲಿ ಹಣ–ಒಡವೆ, ಬೆಲೆಬಾಳುವ ವಸ್ತುಗಳು ದೊರಕಿರಬಹುದು. ಆದರೆ, ಈ ಹುಡುಕುವ ಕಾರ್ಯವನ್ನು ಸುದ್ದಿವಾಹಿನಿಗಳು ಐಟಿ, ಈಡಿ ಮತ್ತು ಸಿಬಿಐ ದಾಳಿಯ ಸಂದರ್ಭದಲ್ಲಿಯಂತೆ ವರದಿ ಮಾಡಿದ್ದು ಸರಿಯಲ್ಲ. ಒಂದು ಹೃದಯವಿದ್ರಾವಕ ಘಟನೆಯನ್ನು ವರದಿ ಮಾಡುವಾಗ ಅನುಸರಿಸಬೇಕಾದ ಕನಿಷ್ಠ ಸೌಜನ್ಯವನ್ನು ತೋರಿಸದಿರುವುದು ವಿಷಾದನೀಯ. ಅರ್ಚಕರನ್ನು ಕೆಲವು ವಾಹಿನಿಗಳು ಅರೋಪಿಗಳಾಗಿ ಬಿಂಬಿಸಿದಂತೆ ಕಾಣುತ್ತಿತ್ತು. ವಾಹಿನಿಗಳು ಅರ್ಚಕರ ಸಾವು ಬದುಕಿನ ಹೋರಾಟಕ್ಕಿಂತ ಅವರ ಸಂಪತ್ತಿನ ಬಗೆಗೆ ಗಮನ ಹರಿಸಿದ್ದು ಶೋಚನೀಯ. ಅರ್ಚಕರು ಅಪರಾಧಿಯಾಗಿರಲಿಲ್ಲ. ಈ ನಿಟ್ಟಿನಲ್ಲಿ ಸುದ್ದಿವಾಹಿನಿಗಳು ಇನ್ನೂ ಹೆಚ್ಚಿನ ಬದ್ಧತೆ ತೋರಿಸಬೇಕಾಗಿದೆ.

—ರಮಾನಂದ ಶರ್ಮಾ, ಬೆಂಗಳೂರು

## ಸಿರಿಗನ್ನಡಂ ಕೊಲ್ಗೆ!

'ನಮ್ಮನೆ ಯುವರಾಣಿ'ಯ ರಾಜ, 'ಗೀತ'ದ ನಾಯಕಿ, ಮಂಗಳ ಗೌರಿ ಮತ್ತು ಅವಳ ಪೊಲೀಸಪ್ಪನ ಅಮ್ಮ ಇವರೆಲ್ಲರ ಕನ್ನಡ 'ಸರಿಗನ್ನಡಂ ಗಲ್ಗೆ ಅಲ್ಲ ಕೊಲ್ಗೆ'. ಇವರುಗಳ ಮತ್ತು ಇಂತಹ ಹಲವಾರು 'ಟೀವಿ ಕಲಾವಿದರ' ಕನ್ನಡ, ಸರಿಗನ್ನಡ ಎಂದು ಆಗುತ್ತದೆ. ಇವರ ಮಧ್ಯೆಯೇ ಹಲವು ಸರಿಯಾದ ಕನ್ನಡ ಕಲಾವಿದರು ಇದ್ದರೂ ಈ ತಾರೆಯರಿಗೆ ಕನ್ನಡ ಕಲಿಸುವರು ಯಾರು? ಬಹುಶಃ ಈ ಧಾರಾವಾಹಿಗಳ ನಿರ್ದೇಶಕರ ಕನ್ನಡವೂ ಇದೇ ರೀತಿಯಾಗಿರಬಹುದು ಅಥವಾ ಅವರಿಗೆ ಇಂತಹವರನ್ನು ತಿದ್ದುವ ಶಕ್ತಿ, ಧೈರ್ಯ ಇಲ್ಲವೇನೊ!

—ಕೆ.ಎಸ್. ಸೋಮೇಶ್ವರ ಬೆಂಗಳೂರು

## ನಗಬೇಕು, ನಗೆ ಬೇಕು

ನಗು ಮಾನವನ ಸುಖಜೀವನಕ್ಕೆ ಅಗತ್ಯ ಟಾನಿಕ್. ನಗುತ್ತಿರುವುದರಿಂದ ಮುಖದ ಸ್ನಾಯುಗಳು ಸಡಿಲಗೊಂಡು ನರ ಮಂಡಲ ಶಾಂತಸ್ಥಿತಿಯಲ್ಲಿರುತ್ತದೆ. ಇಂದು ನಗು ಅದೃಶ್ಯವಾಗುತ್ತಿದೆ. ಪತ್ರಿಕೆಗಳಲ್ಲಿ ಮೊದಲೆಲ್ಲ ಹಾಸ್ಯಕ್ಕೆ ಮೀಸಲಾಗಿರುತ್ತಿದ್ದ ನಾಲ್ಕೈದು ಪುಟಗಳು ಕಾಣೆಯಾಗಿವೆ. ಆಗೊಮ್ಮೆ ಈಗೊಮ್ಮೆ ಪ್ರಕಟವಾದರೂ ನಗೆ ತರಿಸುವುದಿಲ್ಲ. ಟೀವಿ ಕಾಮಿಡಿ ಚಾನಲ್‌ಗಳು, ಇತರೆ ವಾಹಿನಿಗಳಲ್ಲಿ ಪ್ರಸಾರವಾಗುವ ನಗುವಿನ ತುಣುಕುಗಳು, ಹಾಡಿದ್ದೇ ಹಾಡೋ ಕಿಸಬಾಯಿದಾಸ ಎಂಬಂತೆ ತಿಂಗಳುಗಟ್ಟಲೇ ಹಳೆಯ ರೀಲನ್ನೇ ಸುತ್ತುತ್ತಿವೆ. ಎಲ್ಲವೂ ಚರ್ವಿತ ಚರ್ವಣವೆನಿಸುತ್ತದೆ. ನಗು ಅಲಭ್ಯವಾಗಿ ಜನರ ಸ್ವಾಸ್ಥ್ಯ ಕೆಡುವ ಮುನ್ನ ನಮ್ಮ ಪತ್ರಿಕೆಗಳು, ಟೀವಿ ವಾಹಿನಿಗಳು ವಿಧವಿಧದ ಹಾಸ್ಯ ಸಾಮಗ್ರಿಗೆ ಒತ್ತು ನೀಡಿ ಪ್ರಸಾರ ಮಾಡಿ ವೀಕ್ಷಕರನ್ನು ಆರೋಗ್ಯವಂತರನ್ನಾಗಿ ಮಾಡಲಿ.

—ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ